# ಕರ್ನಾಟಕ ಸರ್ಕಾರ

## ಆರ್ಥಿಕ ಇಲಾಖೆ

ಸಂಖ್ಯೆ. ಆಇ 20 ಬಿಪಿಇ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:11.11.2020.

**<u>ಸುತ್ತೋಲೆ</u>**

**ವಿಷಯ: ಮಕ್ಕಳ ಆಯವ್ಯಯ 2021–22**

***

ಕರ್ನಾಟಕ ಸರ್ಕಾರವು ಹಣಕಾಸು ವರ್ಷ 2020–21 ರಿಂದ ಮಕ್ಕಳ ಆಯವ್ಯಯವನ್ನು ಸಿದ್ಧಪಡಿಸಲು ಸರ್ಕಾರದ ಆದೇಶ ಸಂಖ್ಯೆ:ಆಇ 434 ವೆಚ್ಚ 10/2019 ದಿನಾಂಕ:27ನೇ ಆಗಸ್ಟ್ 2019ರ ಮೂಲಕ ನಿರ್ಧರಿಸಿದೆ.

2. ಮಕ್ಕಳ ಆಯವ್ಯಯ ತ:ಖ್ತೆಯು ಕರ್ನಾಟಕ ಸರ್ಕಾರದ ಆಯವ್ಯಯದಲ್ಲಿ ಮಕ್ಕಳ (0–18 ವರ್ಷಗಳು) ಅಭಿವೃದ್ಧಿ ಯೋಜನೆ ಮತ್ತು ಕಾರ್ಯಕ್ರಮಗಳಿಗೆ ಒಟ್ಟು ಎಷ್ಟು ಹಂಚಿಕೆ ಮಾಡಲಾಗಿದೆ ಮತ್ತು ವೆಚ್ಚ ಮಾಡಲಾಗಿದೆ ಎಂದು ವಿಶ್ಲೇಷಿಸುವ ಉದ್ದೇಶ ಹೊಂದಿದೆ.

3. ಮೇಲೆ ಉಲ್ಲೇಖಿಸಿರುವ ಸರ್ಕಾರದ ಆದೇಶದ ಪ್ರಕಾರ, ಕರ್ನಾಟಕ ಸರ್ಕಾರದ ಎಲ್ಲಾ ಆಡಳಿತ ಇಲಾಖೆಗಳು, ತಮ್ಮ ಇಲಾಖೆಯಡಿಯಲ್ಲಿ ಬರುವ ಪ್ರತಿಯೊಂದು ಮಕ್ಕಳ ಕೇಂದ್ರಿತ ಯೋಜನೆ/ಕಾರ್ಯಕ್ರಮಗಳ ಆಯವ್ಯಯ ವಿವರಗಳೊಂದಿಗೆ ಪ್ರತಿ ಯೋಜನೆ/ಕಾರ್ಯಕ್ರಮಗಳ ಹಂಚಿಕೆ ಮತ್ತು ವೆಚ್ಚದ ಮಾಹಿತಿಯನ್ನು ಅಧಿಕೃತವಾಗಿ ಒದಗಿಸಬೇಕಿದೆ. ಅಲ್ಲದೆ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಮಕ್ಕಳ ಕೇಂದ್ರಿತ ಯಾವುದೇ ಯೋಜನೆ/ಕಾರ್ಯಕ್ರಮಗಳ ಮಾಹಿತಿಯನ್ನು ಮತ್ತು ಇತರೆ ಸಂಬಂಧಿತ ಮಾಹಿತಿಯನ್ನು ಸಹ ನೀಡಬೇಕಾಗುತ್ತದೆ. ಆದ್ದರಿಂದ, 2019–20 ಮತ್ತು 2020–21ನೇ ಸಾಲಿಗೆ ಸಂಬಂಧಿಸಿದಂತೆ ಆಡಳಿತ ಇಲಾಖೆಗಳು ಪ್ರಸ್ತುತ ಚಾಲ್ತಿಯಲ್ಲಿರುವ ಮಕ್ಕಳ ಕೇಂದ್ರಿತ ಯೋಜನೆ/ಕಾರ್ಯಕ್ರಮಗಳು ಮತ್ತು ಮಕ್ಕಳ ಕೇಂದ್ರಿತ ಯೋಜನೇತರ/ಕಾರ್ಯಕ್ರಮೇತರ ಹಂಚಿಕೆ ಮತ್ತು ವೆಚ್ಚದ ಮಾಹಿತಿಯನ್ನು **ಅನುಬಂಧ–1** ರಲ್ಲಿ ನೀಡಿರುವ ನಮೂನೆಯಲ್ಲಿ ಒದಗಿಸುವುದು ಹಾಗೂ ಉದ್ದೇಶಿಸಿರುವ/ಪ್ರಸ್ತಾಪಿಸುವ ಮಕ್ಕಳ ಕೇಂದ್ರಿತ ಯೋಜನೆ/ಕಾರ್ಯಕ್ರಮಗಳು ಮತ್ತು ಮಕ್ಕಳ ಕೇಂದ್ರಿತ ಯೋಜನೇತರ/ಕಾರ್ಯಕ್ರಮೇತರ ಮಾಹಿತಿಯನ್ನು **ಅನುಬಂಧ–2** ರಲ್ಲಿ ನೀಡಿರುವ ನಮೂನೆಯಲ್ಲಿ ಒದಗಿಸುವುದು.

4. ಭರ್ತಿ ಮಾಡಿದ ನಮೂನೆಗಳನ್ನು **05ನೇ ಜನವರಿ 2021ರ** ಒಳಗೆ, ನಿರ್ದೇಶಕರು, ವಿತ್ತೀಯ ಕಾರ್ಯನೀತಿ ಸಂಸ್ಥೆ, ಬೆಂಗಳೂರು–ಮೈಸೂರು ರಸ್ತೆ, ಕೆಂಗೇರಿ ಅಂಚೆ, ಕೆಂಗೇರಿ, ಬೆಂಗಳೂರು–560060 ಇಲ್ಲಿಗೆ ಅಂಚೆ ಮೂಲಕ ಅಥವಾ director@fpibangalore.gov.in ಇ–ಮೇಲ್ ಕಳುಹಿಸುವುದು. ಈ ಕುರಿತು, ಹೆಚ್ಚಿನ ಮಾಹಿತಿ ಅಥವಾ ಸ್ಪಷ್ಟೀಕರಣಕ್ಕಾಗಿ ಡಾ.ಎಂ.ಆರ್.ಅನಂತರಾಮು, ಯೋಜನೆ ಶೈಕ್ಷಣಿಕ ಸಮನ್ವಯಾಧಿಕಾರಿ (ದೂರವಾಣಿ ಸಂಖ್ಯೆ: 080–2697–1000), ವಿತ್ತೀಯ ಕಾರ್ಯನೀತಿ ಸಂಸ್ಥೆ, ಬೆಂಗಳೂರು ಇವರನ್ನು ಸಂಪರ್ಕಿಸುವುದು.

5. ಅನುಬಂಧಗಳಲ್ಲಿ ನೀಡಿರುವ ನಮೂನೆಗಳು ಎರಡು ಉದ್ದೇಶಗಳನ್ನು ಹೊಂದಿರುತ್ತದೆ. (ಅ) ಯೋಜನೆ/ಕಾರ್ಯಕ್ರಮಗಳನ್ನು 100% ಮಕ್ಕಳ ಕೇಂದ್ರಿತ ಮತ್ತು 100% ಗಿಂತ ಕಡಿಮೆ ಮಕ್ಕಳ ಕೇಂದ್ರಿತವೆಂಬ ವರ್ಗೀಕರಣವನ್ನು ಸ್ಥಿರೀಕರಿಸುವುದು. (ಆ) 2021–22 ನೇ ಸಾಲಿನ ಮಕ್ಕಳ ಆಯವ್ಯಯ ದಾಖಲೆಯನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಮಕ್ಕಳ ಕೇಂದ್ರಿತ ಯೋಜನೆ/ ಕಾರ್ಯಕ್ರಮಗಳ ಉದ್ದೇಶ ಮತ್ತು ಕಾರ್ಯಕ್ಷಮತೆ ಕುರಿತು ಸಂಕ್ಷಿಪ್ತ ವಿವರಣೆಯನ್ನು ನೀಡುವುದು. ಕಳೆದ ವರ್ಷ ಅನುಸರಿಸಿದಂತೆ ವಿತ್ತೀಯ ಕಾರ್ಯನೀತಿ ಸಂಸ್ಥೆಯು ಮಕ್ಕಳ ಆಯವ್ಯಯದ ಸಿದ್ಧತೆಗೆ Validation ಕಾರ್ಯಗಾರವನ್ನು ನಡೆಸಲಿದೆ. ಇದಲ್ಲದೆ ಮಕ್ಕಳ ಆಯವ್ಯಯ ತಯಾರಿಕೆಯನ್ನು ಸುಗಮಗೊಳಿಸಲು ವಿತ್ತೀಯ ಕಾರ್ಯನೀತಿ ಸಂಸ್ಥೆಯು ಸಂಬಂದಪಟ್ಟ ಎಲ್ಲಾ ಆಡಳಿತ ಇಲಾಖೆಗಳಿಗೆ Validation ಕಾರ್ಯಗಾರದ ಮೊದಲು ಪೂರ್ವಭಾವಿ (Orientation) ಕಾರ್ಯಕ್ರಮವನ್ನು ನಡೆಸಲಿದೆ.

6. ಈ ಸುತ್ತೋಲೆಯನ್ನು ಅನುಬಂಧಗಳೊಂದಿಗೆ ಆರ್ಥಿಕ ಇಲಾಖೆಯ ವೆಬ್ ಸೈಟ್ www.finance.karnataka.gov.in ನಿಂದ ಪಡೆಯಬಹುದು.

(ಡಾ.ಏಕ್‌ರೂಪ್ ಕೌರ್)
ಸರ್ಕಾರದ ಕಾರ್ಯದರ್ಶಿ(ಆ ಮತ್ತು ಸಂ),
ಆರ್ಥಿಕ ಇಲಾಖೆ.

ಇವರಿಗೆ:

1. ಪ್ರಧಾನ ಮಹಾಲೇಖಪಾಲರು, (ಎ & ಇ) / (ಜಿ & ಎಸ್ ಎಸ್ ಎ) / (ಇ & ಎಸ್ ಎಸ್ ಎ), ಕರ್ನಾಟಕ.

2. ಸರ್ಕಾರದ ಎಲ್ಲಾ ಅಪರ ಮುಖ್ಯಕಾರ್ಯದರ್ಶಿಗಳು/ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳು.
3. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ.
4. ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್.
5. ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.
6. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
7. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು.
8. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
9. ನಿರ್ದೇಶಕರು, ವಿತ್ತೀಯ ಕಾರ್ಯನೀತಿ ಸಂಸ್ಥೆ, ಕೆಂಗೇರಿ, ಬೆಂಗಳೂರು.
10. ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರು.
11. ಆರ್ಥಿಕ ಇಲಾಖೆಯ ಎಲ್ಲಾ ಅಪರ ಕಾರ್ಯದರ್ಶಿಗಳು /ಜಂಟಿ ಕಾರ್ಯದರ್ಶಿಗಳು/ ಉಪ ಕಾರ್ಯದರ್ಶಿಗಳು/ ಅಧೀನ ಕಾರ್ಯದರ್ಶಿಗಳು / ಶಾಖಾಧಿಕಾರಿಗಳು.
12. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಎಲ್ಲಾ ಅಪರ ಕಾರ್ಯದರ್ಶಿಗಳು /ಜಂಟಿ ಕಾರ್ಯದರ್ಶಿಗಳು/ ಉಪ ಕಾರ್ಯದರ್ಶಿಗಳು/ ಅಧೀನ ಕಾರ್ಯದರ್ಶಿಗಳು / ಶಾಖಾಧಿಕಾರಿಗಳು.
13. ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.
14. ಕಛೇರಿ ಪ್ರತಿ / ಹೆಚ್ಚುವರಿ ಪ್ರತಿಗಳು.

## ಅನುಬಂಧ-1

## ಮಕ್ಕಳ ಉದ್ದೇಶಿತ ಅಯವ್ಯಯ 2021-22

ಇಲಾಖೆಯ ಹೆಸರು

ಬೇಡಿಕೆ ಸಂಖ್ಯೆ

**I.** ಶೇ. 100ರ ಮಕ್ಕಳ ಕೇಂದ್ರಿತ ಕಾರ್ಯಕ್ರಮಗಳು (ಯೋಜನೆಗಳು)

| ಕ್ರ. ಸಂ | ಲೆಕ್ಕ ಶೀರ್ಷಿಕೆ | ವಲಯ:<br>i.ಕೇಂ.ಪು ಯೋ<br>ii ಕೇ.ಯೋ<br>iii ರಾಜ್ಯ<br>iv ಜಿಲ್ಲಾ | ಪ್ರಾರಂಭವಾದ ವರ್ಷ | ಯೋಜನೆಯ ಉದ್ದೇಶಗಳು | ಆರ್ಥಿಕ ಹಂಚಿಕೆಗಳು (ಲಕ್ಷ ರೂ.ಗಳಲ್ಲಿ) | | | ಆರ್ಥಿಕ ಸಾಧನೆ (ಲಕ್ಷ ರೂ. ಗಳಲ್ಲಿ) | | | | ಭೌತಿಕ ಗುರಿ (ಸಂಖ್ಯೆಗಳಲ್ಲಿ) | | ಭೌತಿಕ ಸಾಧನೆ (ಸಂಖ್ಯೆಗಳಲ್ಲಿ) | |
|---|---|---|---|---|---|---|---|---|---|---|---|---|---|---|---|
| | | | | | 2019-20 | | 2020-21 | 2019-20 | | 2020-21 (ಡಿಸೆಂಬರ್ 2020ರವರೆಗೆ) | | 2019-20 | 2020-21 | 2019-20 | 2020-21 (ಡಿಸೆಂಬರ್ 2020ರವರೆಗೆ) |
| | | | | | BE | RE | BE | ಬಿಡುಗಡೆ | ಖರ್ಚು | ಬಿಡುಗಡೆ | ಖರ್ಚು | | | | |
| **1** | **2** | **3** | **4** | **5** | **6** | **7** | **8** | **9** | **10** | **11** | **12** | **13** | **14** | **15** | **16** |
| 1 | | | | | | | | | | | | | | | |
| 2 | | | | | | | | | | | | | | | |

**II.** ಶೇ. 100ಕ್ಕಿಂತ ಕಡಿಮೆ ಮಕ್ಕಳ ಕೇಂದ್ರಿತ ಕಾರ್ಯಕ್ರಮಗಳು (ಯೋಜನೆಗಳು)

| ಕ್ರ. ಸಂ | ಲೆಕ್ಕ ಶೀರ್ಷಿಕೆ | ವಲಯ:<br>i.ಕೇಂ.ಪು.ಯೋ<br>ii ಕೇ.ಯೋ<br>iii ರಾಜ್ಯ<br>iv ಜಿಲ್ಲಾ | ಪ್ರಾರಂಭವಾದ ವರ್ಷ | ಯೋಜನೆಯ ಉದ್ದೇಶಗಳು | ಆರ್ಥಿಕ ಹಂಚಿಕೆಗಳು (ಲಕ್ಷ ರೂ. ಗಳಲ್ಲಿ) | | | ಆರ್ಥಿಕ ಸಾಧನೆ (ಲಕ್ಷ ರೂ.ಗಳಲ್ಲಿ) | | | | ಭೌತಿಕ ಗುರಿ (ಸಂಖ್ಯೆಗಳಲ್ಲಿ) | | ಭೌತಿಕ ಸಾಧನೆ (ಸಂಖ್ಯೆಗಳಲ್ಲಿ) | |
|---|---|---|---|---|---|---|---|---|---|---|---|---|---|---|---|
| | | | | | 2019-20 | | 2020-21 | 2019-20 | | 2020-21 (ಡಿಸೆಂಬರ್ 2020ರವರೆಗೆ) | | | | | |
| | | | | | BE | RE | BE | ಬಿಡುಗಡೆ | ಖರ್ಚು | ಬಿಡುಗಡೆ | ಖರ್ಚು | | | | |
| **1** | **2** | **3** | **4** | **5** | **6** | **7** | **8** | **9** | **10** | **11** | **12** | **13** | **14** | **15** | **16** |
| 1 | | | | | | | | | | | | | | | |
| 2 | | | | | | | | | | | | | | | |

**III.** ಶೇ. 100ರ ಮಕ್ಕಳ ಕೇಂದ್ರಿತ ಕಾರ್ಯಕ್ರಮೇತರ (ಯೋಜನೇತರ) ಹಂಚಿಕೆಗಳು

| ಕ್ರ.ಸಂ | ಲೆಕ್ಕ ಶೀರ್ಷಿಕೆ | ವಲಯ:<br>I ಕೇಂ.ಪು.ಯೋ<br>ii ಕೇ.ಯೋ<br>iii ರಾಜ್ಯ<br>iv ಜಿಲ್ಲಾ |
|---|---|---|
| **1** | **2** | **3** |
| 1 | | |
| 2 | | |

**IV.** ಶೇ. 100ಕ್ಕಿಂತ ಕಡಿಮೆ ಮಕ್ಕಳ ಕೇಂದ್ರಿತ ಕಾರ್ಯಕ್ರಮೇತರ (ಯೋಜನೇತರ) ಹಂಚಿಕೆಗಳು

| ಕ್ರ.ಸಂ | ಲೆಕ್ಕ ಶೀರ್ಷಿಕೆ | ವಲಯ:<br>i.ಕೇಂ.ಪು.ಯೋ<br>ii ಕೇ.ಯೋ<br>iii ರಾಜ್ಯ<br>iv ಜಿಲ್ಲಾ |
|---|---|---|
| **1** | **2** | **3** |
| 1 | | |
| 2 | | |

ಟಿಪ್ಪಣಿ: ಕೇಂ.ಪು.ಯೋ – ಕೇಂದ್ರ ಪುರಸ್ಕೃತ ಯೋಜನೆ, ಕೇಂ. ಯೋ – ಕೇಂದ್ರೀಯ ಯೋಜನೆ

ಅನುಬಂಧ-2

ಮಕ್ಕಳ ಉದ್ದೇಶಿತ ಅಯವ್ಯಯ 2021-22

ಉದ್ದೇಶಿಸಿರುವ/ಪ್ರಸ್ತಾಪಿಸಿರುವ ಮಕ್ಕಳ ಕೇಂದ್ರಿತ ಯೋಜನೆಗಳು/ ಕಾರ್ಯಕ್ರಮಗಳು

ಇಲಾಖೆಯ ಹೆಸರು

ಬೇಡಿಕೆ ಸಂಖ್ಯೆ

**I.** ಶೇ. 100ರ ಮಕ್ಕಳ ಕೇಂದ್ರಿತ ಕಾರ್ಯಕ್ರಮಗಳು (ಯೋಜನೆಗಳು)

| ಕ್ರ.ಸಂ | ಲೆಕ್ಕ ಶೀರ್ಷಿಕೆ | ಶೀರ್ಷಿಕೆ | ವಲಯ:<br>i.ಕೇಂ.ಪು.ಯೋ<br>ii ಕೇ.ಯೋ<br>iii ರಾಜ್ಯ<br>iv ಜಿಲ್ಲಾ | ಯೋಜನೆಯ ಉದ್ದೇಶಗಳು |
|---|---|---|---|---|
| **1** | **2** | **3** | **4** | **5** |
| 1 | | | | |
| 2 | | | | |

**II.** ಶೇ. 100ಕ್ಕಿಂತ ಕಡಿಮೆ ಮಕ್ಕಳ ಕೇಂದ್ರಿತ ಕಾರ್ಯಕ್ರಮಗಳು (ಯೋಜನೆಗಳು)

| ಕ್ರ.ಸಂ | ಲೆಕ್ಕ ಶೀರ್ಷಿಕೆ | ಶೀರ್ಷಿಕೆ | ವಲಯ:<br>i.ಕೇಂ.ಪು.ಯೋ<br>ii ಕೇ.ಯೋ<br>iii ರಾಜ್ಯ<br>iv ಜಿಲ್ಲಾ | ಯೋಜನೆಯ ಉದ್ದೇಶಗಳು |
|---|---|---|---|---|
| **1** | **2** | **3** | **4** | **5** |
| 1 | | | | |
| 2 | | | | |

**III.** ಶೇ. 100ರ ಮಕ್ಕಳ ಕೇಂದ್ರಿತ ಕಾರ್ಯಕ್ರಮೇತರ (ಯೋಜನೇತರ) ಹಂಚಿಕೆಗಳು

| ಕ್ರ.ಸಂ | ಲೆಕ್ಕ ಶೀರ್ಷಿಕೆ | ಶೀರ್ಷಿಕೆ | ವಲಯ:<br>i.ಕೇಂ.ಪು.ಯೋ<br>ii ಕೇ.ಯೋ<br>iii ರಾಜ್ಯ<br>iv ಜಿಲ್ಲಾ |
|---|---|---|---|
| **1** | **2** | **3** | **4** |
| 1 | | | |
| 2 | | | |

**IV.** ಶೇ. 100ಕ್ಕಿಂತ ಕಡಿಮೆ ಮಕ್ಕಳ ಕೇಂದ್ರಿತ ಕಾರ್ಯಕ್ರಮೇತರ (ಯೋಜನೇತರ) ಹಂಚಿಕೆಗಳು

| ಕ್ರ.ಸಂ | ಲೆಕ್ಕ ಶೀರ್ಷಿಕೆ | ಶೀರ್ಷಿಕೆ | ವಲಯ:<br>i.ಕೇಂ.ಪು.ಯೋ<br>ii ಕೇ.ಯೋ<br>iii ರಾಜ್ಯ<br>iv ಜಿಲ್ಲಾ |
|---|---|---|---|
| **1** | **2** | **3** | **4** |
| 1 | | | |
| 2 | | | |

ಟಿಪ್ಪಣಿ: ಕೇಂ.ಪು.ಯೋ – ಕೇಂದ್ರ ಪುರಸ್ಕೃತ ಯೋಜನೆ, ಕೇಂ. ಯೋ – ಕೇಂದ್ರೀಯ ಯೋಜನೆ